# ಪಂಚಾಯತ್ ರಾಜ್ ಸಂಸ್ಥೆಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳ ಮೇಲಿನ ಸಂಯೋಜಿತ ವಾರ್ಷಿಕ ತಾಂತ್ರಿಕ ಪರಿಶೀಲನಾ ವರದಿ

**2020–2022**

**ಕರ್ನಾಟಕ ಸರ್ಕಾರ**

**ಪ್ರಧಾನ ಮಹಾಲೇಖಾಪಾಲರು (ಲೆಕ್ಕಪರಿಶೋಧನೆ–I) ರವರ ಕಛೇರಿ,**

**ಕರ್ನಾಟಕ**

## ವಿಷಯಸೂಚಿ


| ವಿವರಗಳು | ಕಂಡಿಕೆ ಸಂಖ್ಯೆ | ಪುಟ ಸಂಖ್ಯೆ |
|---|---|---|
| ಮುನ್ನುಡಿ | | v |
| ಮುನ್ನೋಟ | | vii |
| **ಅಧ್ಯಾಯ–I** | | |
| **ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಹೊಣೆಗಾರಿಕೆಯ ಚೌಕಟ್ಟು ಮತ್ತು ಹಣಕಾಸಿನ ವರದಿ** | | |
| ಪರಿಚಯ | 1.1 | 1 |
| ಪಂಚಾಯತ್ ರಾಜ್ ಸಂಸ್ಥೆಗಳ ಸಾಂಸ್ಥಿಕ ರಚನೆ | 1.2 | 2 |
| ಪಂಚಾಯತ್ ರಾಜ್ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಸಿಎಜಿಯವರ ಅಧ್ಯಾದೇಶ ಮತ್ತು ಲೆಕ್ಕಪರಿಶೋಧನೆಯ ವ್ಯಾಪ್ತಿ | 1.3 | 2 |
| ನಿಧಿಗಳು, ಕಾರ್ಯಗಳು ಮತ್ತು ಕಾರ್ಯನಿರ್ವಾಹಕರ ಅಧಿಕಾರ ಹಂಚಿಕೆ | 1.4 | 3 |
| ಸಮಿತಿಗಳ ರಚನೆ | 1.5 | 5 |
| ಆರ್ಥಿಕ ಅಧಿಕಾರಗಳ ನಿಯೋಜನೆ | 1.6 | 6 |
| ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಲೆಕ್ಕಪತ್ರ ವ್ಯವಸ್ಥೆ | 1.7 | 7 |
| ಹಣಕಾಸಿನ ಚಿತ್ರಣ | 1.8 | 10 |
| ಪಂಚಾಯತ್ ರಾಜ್ ಸಂಸ್ಥೆಗಳ ಆಂತರಿಕ ನಿಯಂತ್ರಣ ವ್ಯವಸ್ಥೆಗಳು | 1.9 | 13 |
| ಜಾಗೃತಿಯ ಕಾರ್ಯತಂತ್ರ | 1.10 | 15 |
| ವರದಿ ಮಾಡುವ ಚೌಕಟ್ಟು | 1.11 | 18 |
| ಲೆಕ್ಕಪರಿಶೋಧನೆಯ ವ್ಯವಸ್ಥೆಗಳು | 1.12 | 20 |
| ಸ್ಥಳೀಯ ಸಂಸ್ಥೆಗಳು ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸಮಿತಿಯು ಚರ್ಚಿಸಬೇಕಾದ ಕಂಡಿಕೆಗಳು | 1.13 | 23 |
| ನಾಲ್ಕನೇ ರಾಜ್ಯ ಹಣಕಾಸು ಆಯೋಗದ ಶಿಫಾರಸುಗಳ ಅನುಷ್ಠಾನ | 1.14 | 24 |
| **ಅಧ್ಯಾಯ–II** | | |
| **ನಗರ ಸ್ಥಳೀಯ ಸಂಸ್ಥೆಗಳಲ್ಲಿ ಹೊಣೆಗಾರಿಕೆಯ ಚೌಕಟ್ಟು ಮತ್ತು ಹಣಕಾಸಿನ ವರದಿ** | | |
| ಪರಿಚಯ | 2.1 | 27 |
| ನಗರ ಸ್ಥಳೀಯ ಸಂಸ್ಥೆಗಳ ಸಾಂಸ್ಥಿಕ ರಚನೆ | 2.2 | 28 |
| ನಗರ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಸಿಎಜಿಯ ಲೆಕ್ಕಪರಿಶೋಧನಾ ಅಧ್ಯಾದೇಶ | 2.3 | 28 |
| ಕಾರ್ಯಗಳ ಹಂಚಿಕೆ | 2.4 | 28 |
| ಸಮಿತಿಗಳ ರಚನೆ | 2.5 | 30 |
| ಹಣಕಾಸು ಅಧಿಕಾರಗಳ ನಿಯೋಜನೆ | 2.6 | 33 |
| ಲೆಕ್ಕಪತ್ರಗಳ ನಿರ್ವಹಣೆಯ ವ್ಯವಸ್ಥೆ | 2.7 | 34 |
| ಒಂಬುಡ್ಸ್ಮನ್ | 2.8 | 35 |
| ಅಗ್ನಿ ಅಪಾಯ | 2.9 | 35 |
| ಹಣಕಾಸಿನ ಚಿತ್ರಣ | 2.10 | 36 |
| ವರದಿ ಮಾಡುವಿಕೆಯ ಚೌಕಟ್ಟು | 2.11 | 44 |
| ಲೆಕ್ಕಪರಿಶೋಧನಾ ವ್ಯವಸ್ಥೆಗಳು | 2.12 | 45 |
| ಸ್ಥಳೀಯ ಸಂಸ್ಥೆಗಳು ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸಮಿತಿಯು ಚರ್ಚಿಸಬೇಕಾದ ಕಂಡಿಕೆಗಳು | 2.13 | 47 |

| ಅಧ್ಯಾಯ–III | | |
|---|---|---|
| **ಟಿಜಿಎಸ್ ಮಾಡ್ಯೂಲ್ ನ ಅಡಿಯಲ್ಲಿ ಗ್ರಾಮ ಪಂಚಾಯಿತಿಗಳ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಲೆಕ್ಕಪರಿಶೋಧನೆಯ ಫಲಿತಾಂಶಗಳು** | | |
| ಪರಿಚಯ | 3.1 | 49 |
| ಲೆಕ್ಕಪರಿಶೋಧನೆಯ ಯೋಜನೆ | 3.2 | 49 |
| ಲೆಕ್ಕಪರಿಶೋಧನೆಯ ವಿಧಾನ ಮತ್ತು ಪ್ರಕ್ರಿಯೆ | 3.3 | 50 |
| ನಿಯತಕಾಲಿಕ ಸಲ್ಲಿಕೆಗಳು | 3.4 | 51 |
| ತಪಾಸಣಾ ವರದಿಗಳ ಪ್ರತಿಗಳು | 3.5 | 53 |
| ಸಿಎಜಿ ನಡೆಸಿದ ಗ್ರಾಮ ಪಂಚಾಯಿತಿಗಳ ಪರೀಕ್ಷಾ ಪರಿಶೀಲನೆಯಿಂದ ಬಂದ ಪ್ರಮುಖ ಲೆಕ್ಕಪರಿಶೋಧನಾ ಅಂಶಗಳು | 3.6 | 53 |
| ಅನುಬಂಧಗಳು | | 61 |
| **ಸಂಕ್ಷಿಪ್ತ ರೂಪಗಳ ಶಬ್ದಕೋಶ** | | 125 |


## ಅನುಬಂಧಗಳ ಪಟ್ಟಿ


| ಅನುಬಂಧ ಸಂಖ್ಯೆ | ವಿವರಗಳು | ಪುಟ ಸಂಖ್ಯೆ |
|---|---|---|
| 1.1 | ಪಂಚಾಯತ್ ರಾಜ್ ಸಂಸ್ಥೆಗಳ ಸಾಂಸ್ಥಿಕ ರಚನೆ | 61 |
| 1.2 | ಭಾರತೀಯ ಸಂವಿಧಾನದ ಹನ್ನೊಂದನೇ ಅಧಿಸೂಚಿಯ ಅಡಿಯಲ್ಲಿ 29 ಅಂಶಗಳ ಪಟ್ಟಿ | 62 |
| 1.3 | ಪಂಚಾಯತ್ ರಾಜ್ ಸಂಸ್ಥೆಗಳಿಗೆ ಕಾರ್ಯಗಳ ಹಂಚಿಕೆ | 63 |
| 1.4(ಎ) | ಸ್ಥಾಯಿ ಸಮಿತಿಗಳ ರಚನೆ ಮತ್ತು ಕಾರ್ಯಗಳು | 85 |
| 1.4(ಬಿ) | ರಚಿಸದ ಸಮಿತಿಗಳ ವಿವರಗಳನ್ನು ತೋರಿಸುವ ತಃಖ್ತೆ | 87 |
| 1.5 | 2020–21 ಮತ್ತು 2021–22 ನೇ ಸಾಲಿಗೆ ಪ್ರಧಾನ ಶೀರ್ಷಿಕೆ 8782 ರ ಅಡಿಯಲ್ಲಿ "ಲೋಕಪಯೋಗಿ ಇಲಾಖೆಯ ಚೆಕ್‌ಗಳು" ಮತ್ತು "ಅರಣ್ಯ ಚೆಕ್‌ಗಳು" ಅಡಿಯಲ್ಲಿ ಮೊತ್ತವನ್ನು ತೋರಿಸುವ ತಃಖ್ತೆ. | 89 |
| 1.6 | 2020–21 ಮತ್ತು 2021–22 ವರ್ಷಗಳ ತಾಲ್ಲೂಕು ಪಂಚಾಯತಿ ಮತ್ತು ಗ್ರಾಮ ಪಂಚಾಯತಿ ಸಸ್ಪೆನ್ಸ್ ಖಾತೆಗಳ ಅಡಿಯಲ್ಲಿ ಬಾಕಿಗಳನ್ನು ತೋರಿಸುವ ತಃಖ್ತೆ. | 90 |
| 1.7 | ಪ್ರಮುಖ ಯೋಜನೆಗಳ ನಿಧಿಯ ವಿವರಗಳನ್ನು ತೋರಿಸುವ ತಃಖ್ತೆ. | 91 |
| 1.8 | 2020–21 ಮತ್ತು 2021–22ನೇ ಸಾಲಿನ ಹೆಚ್ಚುವರಿ ಮುದ್ರಾಂಕ ಸುಂಕದೊಂದಿಗೆ ತಾಲ್ಲೂಕು ಪಂಚಾಯಿತಿ ನಿಧಿ–III ವಿವರಗಳನ್ನು ತೋರಿಸುವ ತಃಖ್ತೆ. | 92 |
| 1.9 | 2021–22ನೇ ಸಾಲಿನ 15ನೇ ಹಣಕಾಸು ಆಯೋಗದ ವಿವರಗಳನ್ನು ತೋರಿಸುವ ತಃಖ್ತೆ | 98 |
| 1.10 | 2021–22ನೇ ಸಾಲಿನ 15ನೇ ಹಣಕಾಸು ಆಯೋಗದ ವಿವರಗಳನ್ನು ತೋರಿಸುವ ತಃಖ್ತೆ | 99 |
| 1.11 | 2021–22ರ ಅಂತ್ಯದ ವೇಳೆಗೆ ಜಿಲ್ಲಾ ಪಂಚಾಯತಿಗಳೊಂದಿಗೆ ನಡೆದ 12ನೇ, 13ನೇ ಮತ್ತು 14ನೇ ಹಣಕಾಸು ಅನುದಾನದ ಬಾಕಿಗಳನ್ನು ತೋರಿಸುವ ತಃಖ್ತೆ | 100 |

| ಅನುಬಂಧ ಸಂಖ್ಯೆ | ವಿವರಗಳು | ಪುಟ ಸಂಖ್ಯೆ |
|---|---|---|
| 1.12 | 2021–22ನೇ ಸಾಲಿನ ಅಂತ್ಯದ ವೇಳೆಗೆ ತಾಲ್ಲೂಕು ಪಂಚಾಯಿತಿಗಳೊಂದಿಗೆ ನಡೆದ 12ನೇ ಮತ್ತು 13ನೇ ಹಣಕಾಸು ಅನುದಾನದ ಬಾಕಿಗಳನ್ನು ತೋರಿಸುವ ತಃಖ್ತೆ. | 101 |
| 1.13 | ಐದು ವರ್ಷಗಳಿಗೂ ಹೆಚ್ಚು ಕಾಲ ಕೆಎಸ್‌ಎಎಡಿ ಯಿಂದ ಲೆಕ್ಕಪರಿಶೋಧನೆಯಾಗದ ಗ್ರಾಮ ಪಂಚಾಯಿತಿಗಳನ್ನು ತೋರಿಸುವ ತಃಖ್ತೆ. | 103 |
| 1.14 | 2021–22 ರ ಲೆಕ್ಕಪರಿಶೋಧನಾ ಅವಧಿಯವರೆಗೆ ಬಾಕಿ ಇರುವ ಪರಿಶೀಲನಾ ವರದಿಗಳು ಮತ್ತು ಕಂಡಿಕೆಗಳನ್ನು ತೋರಿಸುವ ತಃಖ್ತೆ – ಪಂಚಾಯತ್ ರಾಜ್ ಸಂಸ್ಥೆಗಳು | 105 |
| 2.1 | ರಾಜ್ಯದಲ್ಲಿ ನಗರ ಸ್ಥಳೀಯ ಸಂಸ್ಥೆಗಳ ಕಾರ್ಯನಿರ್ವಹಣೆಗೆ ಸಂಬಂಧಿಸಿದಂತೆ ಸಾಂಸ್ಥಿಕ ರಚನೆ | 107 |
| 2.2 | ಭಾರತೀಯ ಸಂವಿಧಾನದ ಹನ್ನೆರಡನೇ ಅಧಿಸೂಚಿಯ ಅಡಿಯಲ್ಲಿ ಪಟ್ಟಿಮಾಡಲಾದ 18 ಕಾರ್ಯಗಳು | 108 |
| 3.1 | ಟಿಜಿಎಸ್ ಮಾಡ್ಯೂಲ್ ಅಡಿಯಲ್ಲಿ ಪರೀಕ್ಷಾ ಪರಿಶೀಲನೆ ನಡೆಸಲಾದ ಗ್ರಾಮ ಪಂಚಾಯಿತಿಗಳ ಪಟ್ಟಿಯನ್ನು ತೋರಿಸುವ ತಃಖ್ತೆ | 109 |
| 3.2 | 2020–21ನೇ ಸಾಲಿನ ಕಟ್ಟಡ ಪರವಾನಗಿ ಶುಲ್ಕದ ಕಡಿಮೆ ವಸೂಲಿಯ ವಿವರಗಳನ್ನು ತೋರಿಸುವ ತಃಖ್ತೆ | 112 |
| 3.3 | 2021–22ನೇ ಸಾಲಿನ ಕಟ್ಟಡ ಪರವಾನಗಿ ಶುಲ್ಕದ ಕಡಿಮೆ ವಸೂಲಿ/ವಸೂಲಿಯಾಗದ ವಿವರಗಳನ್ನು ತೋರಿಸುವ ತಃಖ್ತೆ | 113 |
| 3.4 | ಗ್ರಾಮ ಪಂಚಾಯಿತಿವಾರು ಅಮಾನ್ಯ ಚೆಕ್‌ಗಳ ಪಟ್ಟಿ | 114 |
| 3.5 | ತುಮರಿ ಗ್ರಾಮ ಪಂಚಾಯಿತಿಯು ಮಾಡಿದ ಹೆಚ್ಚುವರಿ ಪಾವತಿಗಳ ವಿವರಗಳನ್ನು ತೋರಿಸುವ ತಃಖ್ತೆ | 116 |

## ಮುನ್ನುಡಿ

ಪಂಚಾಯತ್ ರಾಜ್ ಸಂಸ್ಥೆಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳ ಕುರಿತ 2020 ರಿಂದ 2022ರ ಅವಧಿಯ ಸಂಯೋಜಿತ ವಾರ್ಷಿಕ ತಾಂತ್ರಿಕ ಪರಿಶೀಲನಾ ವರದಿ ಕರ್ನಾಟಕ ಸರ್ಕಾರಕ್ಕೆ ಸಲ್ಲಿಸಲು ಸಿದ್ಧಪಡಿಸಲಾಗಿದೆ.

ರಾಜ್ಯ ಸರ್ಕಾರವು ಪಂಚಾಯತ್ ರಾಜ್ ಸಂಸ್ಥೆಗಳು (ಗ್ರಾಮ ಪಂಚಾಯಿತಿಗಳು) ಮತ್ತು ನಗರ ಸ್ಥಳೀಯ ಸಂಸ್ಥೆಗಳ ಲೆಕ್ಕಪರಿಶೋಧನೆಯನ್ನು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರಿಗೆ ಸಿಎಜಿಯ ಡಿಪಿಸಿ ಕಾಯ್ದೆ, 1971ರ ಪರಿಚ್ಛೇಧ 20(1) ರ ಅಡಿಯಲ್ಲಿ ತಾಂತ್ರಿಕ ಮಾರ್ಗದರ್ಶನ ಮತ್ತು ಮೇಲ್ವಿಚಾರಣೆಯ ಅಡಿಯಲ್ಲಿ ಏಪ್ರಿಲ್ 2010 ರಿಂದ ಗ್ರಾಮ ಪಂಚಾಯಿತಿಗಳಿಗೆ ಮತ್ತು ಏಪ್ರಿಲ್ 2011 ರಿಂದ ನಗರ ಸ್ಥಳೀಯ ಸಂಸ್ಥೆಗಳಿಗೆ ಜಾರಿಗೆ ಬರುವಂತೆ ವಹಿಸಿಲಾಯಿತು. ಆದಾಗ್ಯೂ, ಸಂಸ್ಥೆಗಳ ಪ್ರಾಥಮಿಕ ಲೆಕ್ಕಪರಿಶೋಧನೆಯನ್ನು ಕೆಎಸ್ಎಎಡಿಯು ನಡೆಸುತ್ತದೆ.

ಪರೀಕ್ಷಾ ಲೆಕ್ಕಪರಿಶೀಲನೆಯ ಫಲಿತಾಂಶವಾಗಿ 2020–22ರ ಅವಧಿಗೆ ಸಂಬಂಧಿಸಿದಂತೆ ಗಮನಕ್ಕೆ ಬಂದ ವಿಷಯಗಳು ಹಾಗೂ ಹಿಂದಿನ ವರ್ಷಗಳಲ್ಲಿ ಗಮನಕ್ಕೆ ಬಂದರೂ ಹಿಂದಿನ ವರದಿಗಳಲ್ಲಿ ಒಳಗೊಳ್ಳಲಾಗದ ವಿಷಯಗಳನ್ನೂ ಅಗತ್ಯವಿರುವ ಸಂದರ್ಭಗಳಲ್ಲಿ ಈ ವರದಿಯಲ್ಲಿ ಸೇರಿಸಲಾಗಿದೆ.

ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಜಾರಿ ಮಾಡಿದ ಲೆಕ್ಕಪರಿಶೀಲನಾ ಮಾನದಂಡಗಳಿಗೆ ಅನುಗುಣವಾಗಿ ಲೆಕ್ಕಪರಿಶೀಲನೆಯನ್ನು ನಡೆಸಲಾಗಿದೆ.

ಭಾಷಾಂತರಿಸಿದ ಈ ಆವೃತ್ತಿಯಲ್ಲಿನ ಯಾವುದೇ ಸಂದೇಹಗಳಿಗೆ ಆಂಗ್ಲ ಭಾಷಾ ಆವೃತ್ತಿಯೇ ಅಧಿಕೃತವೆಂದು ಪರಿಗಣಿಸಬೇಕು.

## ಮುನ್ನೊಟ

ಈ ವರದಿಯು ಮೂರು ಅಧ್ಯಾಯಗಳನ್ನು ಒಳಗೊಂಡಿದೆ. ಮೊದಲ ಮತ್ತು ಎರಡನೇ ಅಧ್ಯಾಯಗಳು ಕ್ರಮವಾಗಿ ರಾಜ್ಯದ ಪಂಚಾಯತ್ ರಾಜ್ ಸಂಸ್ಥೆಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳ ಅವಲೋಕನವನ್ನು ಒಳಗೊಂಡಿವೆ. ಮೂರನೇ ಅಧ್ಯಾಯವು ತಾಂತ್ರಿಕ ಮಾರ್ಗದರ್ಶನ ಮತ್ತು ಮೇಲ್ವಿಚಾರಣೆಯ ಅಡಿಯಲ್ಲಿ ಗ್ರಾಮ ಪಂಚಾಯಿತಿಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳ ಲೆಕ್ಕಗಳ ಲೆಕ್ಕಪರಿಶೋಧನೆಯಿಂದ ಉಂಟಾಗುವ ಅಂಶಗಳನ್ನು ಒಳಗೊಂಡಿದೆ. ಸಂಶೋಧನೆಗಳ ಸಾರಾಂಶವನ್ನು ಈ ಮುನ್ನೊಟದಲ್ಲಿ ಪ್ರಸ್ತುತಪಡಿಸಲಾಗಿದೆ.

## 1 ಪಂಚಾಯತ್ ರಾಜ್ ಸಂಸ್ಥೆಗಳ ಹೊಣೆಗಾರಿಕೆಯ ಚೌಕಟ್ಟು ಮತ್ತು ಹಣಕಾಸು ವರದಿ

ಜಿಲ್ಲಾ ಪಂಚಾಯಿತಿಗಳು, ತಾಲ್ಲೂಕು ಪಂಚಾಯಿತಿಗಳು ಮತ್ತು ಗ್ರಾಮ ಪಂಚಾಯಿತಿಗಳ 2020–21 ಮತ್ತು 2021–22 ನೇ ಸಾಲುಗಳ ಒಟ್ಟು ಸ್ವೀಕೃತಿಗಳು ಮತ್ತು ಖರ್ಚಿನ ವಿವರ ಈ ಕೆಳಗಿನಂತಿದೆ.

(₹ ಕೋಟಿಯಲ್ಲಿ)

| | 2020–21 | | 2021–22 | |
|---|---|---|---|---|
| **ಪಂಚಾಯತ್ ರಾಜ್ ಸಂಸ್ಥೆಗಳು** | **ಸ್ವೀಕೃತಿಗಳು** | **ಖರ್ಚು** | **ಸ್ವೀಕೃತಿಗಳು** | **ಖರ್ಚು** |
| ಜಿಲ್ಲಾ ಪಂಚಾಯಿತಿ | 17,470.50 | 16,943.24 | 14,929.12 | 12,201.12 |
| ತಾಲ್ಲೂಕು ಪಂಚಾಯಿತಿ | 21,624.03 | 21,391.42 | 23,483.53 | 16,876.40 |
| ಗ್ರಾಮ ಪಂಚಾಯಿತಿ | 6,393.30 | 5,879.03 | 5,849.05 | 4,271.45 |

ಉಪನೊಂದಣಾಧಿಕಾರಿಗಳ ಕಚೇರಿಗಳೊಂದಿಗೆ ಸ್ವೀಕೃತಿಗಳ ಸಮನ್ವಯವಾಗದ ಕಾರಣದಿಂದಾಗಿ, ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ `ಆಯುಕ್ತರು 2019 ರಿಂದ 2022ರ ಅವಧಿಗೆ ಸಂಬಂಧಿಸಿದ ಹೆಚ್ಚುವರಿ ಮುದ್ರಾಂಕ ಶುಲ್ಕವನ್ನು ತಾಲ್ಲೂಕು ಪಂಚಾಯಿತಿಗಳಿಗೆ ವರ್ಗಾಯಿಸಲು ಸಾಧ್ಯವಾಗಲಿಲ್ಲ.

ಜಿಲ್ಲಾ ಪಂಚಾಯಿತಿಗಳು ಮತ್ತು ತಾಲ್ಲೂಕು ಪಂಚಾಯಿತಿಗಳು ಹಿಂದಿನ ಹಣಕಾಸು ಆಯೋಗದ ಅನುದಾನಗಳಲ್ಲಿ ವೆಚ್ಚ ಮಾಡದೆ ಉಳಿದಿರುವ ₹ 29.35 ಕೋಟಿ ಮೊತ್ತವನ್ನು ಸರ್ಕಾರದ ಖಾತೆಗೆ ಜಮೆ ಮಾಡಿರಲಿಲ್ಲ.

ಮಾರ್ಚ್ 2022ರ ಅಂತ್ಯದ ವೇಳೆಗೆ, ವಿವಿಧ ಜಿಲ್ಲಾ ಪಂಚಾಯಿತಿಗಳಲ್ಲಿ 1,590 ಕಂಡಿಕೆಗಳನ್ನು ಹೊಂದಿರುವ 271 ತಪಾಸಣಾ ವರದಿಗಳು, ತಾಲ್ಲೂಕು ಪಂಚಾಯಿತಿಗಳಲ್ಲಿ 5,094 ಕಂಡಿಕೆಗಳನ್ನು ಹೊಂದಿರುವ 808 ತಪಾಸಣಾ ವರದಿಗಳು ಮತ್ತು ಗ್ರಾಮ ಪಂಚಾಯಿತಿಗಳಲ್ಲಿ 4,260 ಕಂಡಿಕೆಗಳನ್ನು ಹೊಂದಿರುವ 389 ತಪಾಸಣಾ ವರದಿಗಳು ಬಾಕಿ ಉಳಿದಿವೆ.

ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಲೋಕಾಯುಕ್ತರು ಮರುಪಡೆಯುವಂತೆ ಆದೇಶಿಸಿದ ₹ 11.81 ಕೋಟಿ ಮೊತ್ತಕ್ಕೆ ಎದುರಾಗಿ, ಮಾರ್ಚ್ 2022ರ ಅಂತ್ಯಕ್ಕೆ ಕೇವಲ ₹ 3.51 ಕೋಟಿ ಮಾತ್ರ ಮರುಪಡೆಯಲಾಗಿದೆ.

**(ಅಧ್ಯಾಯ I)**

## 2 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಹೊಣೆಗಾರಿಕೆಯ ಚೌಕಟ್ಟು ಮತ್ತು ಹಣಕಾಸು ವರದಿ

2017ರಿಂದ 2022ರ ಅವಧಿಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹೊರತುಪಡಿಸಿ ನಗರ ಸ್ಥಳೀಯ ಸಂಸ್ಥೆಗಳ ಸ್ವಂತ ಆದಾಯ ಮತ್ತು ಒಟ್ಟು ಆದಾಯದ ಅನುಪಾತವು ಶೇಕಡಾ 27ರಿಂದ ಶೇಕಡಾ 41 ರಷ್ಟಿತ್ತು ಮತ್ತು ಬಿಬಿಎಂಪಿಯಲ್ಲಿ ಈ ಅನುಪಾತವು ಶೇಕಡಾ 41ರಿಂದ ಶೇಕಡಾ 64ರಷ್ಟಿತ್ತು.

ನಗರ ಸ್ಥಳೀಯ ಸಂಸ್ಥೆಗಳಲ್ಲಿ (ಬಿಬಿಎಂಪಿ ಹೊರತಾಗಿ) ಆಸ್ತಿ ತೆರಿಗೆಯ ಬಾಕಿ ಮೊತ್ತವು 2017–18ರಲ್ಲಿ ₹653 ಕೋಟಿಯಿಂದ 2021–22ರಲ್ಲಿ ₹ 1,666 ಕೋಟಿಗೆ ಏರಿಕೆ ಕಂಡುಬಂದಿದ್ದು, ಈ ಅವಧಿಯಲ್ಲಿ ತೆರಿಗೆ ಸಂಗ್ರಹ ಪ್ರಮಾಣವು 2017–18ರ ಶೇಕಡಾ 53ರಿಂದ 2021–22ರಲ್ಲಿ ಶೇಕಡಾ 36ಕ್ಕೆ ಇಳಿಯಿತು.

ಬಿಬಿಎಂಪಿಯಲ್ಲಿ ಆಸ್ತಿ ತೆರಿಗೆಯ ಬಾಕಿ ಮೊತ್ತವು 2017–18ರಲ್ಲಿ ₹ 1,600 ಕೋಟಿಯಿಂದ 2021–22ರಲ್ಲಿ ₹ 1,860 ಕೋಟಿಗೆ ಏರಿಕೆಯಾಗಿದೆ ಮತ್ತು ಈ ಅವಧಿಯಲ್ಲಿ ತೆರಿಗೆ ಸಂಗ್ರಹ ಪ್ರಮಾಣವು 2017–18ರಲ್ಲಿದ್ದ ಶೇಕಡಾ 57ರಿಂದ 2021–22ರಲ್ಲಿ ಶೇಕಡಾ 62ಕ್ಕೆ ಏರಿತು.

ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳು (ಬಿಬಿಎಂಪಿ ಹೊರತಾಗಿ) ₹ 503.00 ಕೋಟಿ ಆರೋಗ್ಯ ಉಪಕರ, ₹ 54.00 ಕೋಟಿ ಗ್ರಂಥಾಲಯ ಉಪಕರ ಮತ್ತು ₹ 29.00 ಕೋಟಿ ಭಿಕ್ಷಾಟನೆ ಉಪಕರವನ್ನು ಸಂಬಂಧಿತ ಇಲಾಖೆಗಳಿಗೆ ಅಥವಾ ಲೆಕ್ಕಶೀರ್ಷಿಕೆಗಳಿಗೆ ಜಮೆ ಮಾಡಿರಲಿಲ್ಲ. ಬಿಬಿಎಂಪಿಯು ಕೂಡಾ ಸಂಪೂರ್ಣ ಆರೋಗ್ಯ ಉಪಕರ ₹1275.18 ಕೋಟಿ, ಗ್ರಂಥಾಲಯ ಉಪಕರ (₹ 256.36 ಕೋಟಿ) ಮತ್ತು ಭಿಕ್ಷಾಟನೆ ಉಪಕರವನ್ನು (₹ 31.48 ಕೋಟಿ) ಜಮೆ ಮಾಡಿರಲಿಲ್ಲ.

2019–20ರಿಂದ 2021–22ರ ಅವಧಿಗೆ ಸಂಬಂಧಿಸಿದ ಸ್ಥಿರಾಸ್ತಿಗಳ ವರ್ಗಾವಣೆಯ ಮೇಲಿನ ತೆರಿಗೆಯನ್ನು ನಗರ ಸ್ಥಳೀಯ ಸಂಸ್ಥೆಗಳಿಗೆ ನೀಡುವ ಪ್ರಕ್ರಿಯೆಯು ಜನವರಿ 2023ರ ತನಕ ಪೂರ್ಣಗೊಂಡಿರಲಿಲ್ಲ. ಆಸ್ತಿ ತೆರಿಗೆ ಮಂಡಳಿಯನ್ನು ರಾಜ್ಯದಲ್ಲಿ ಜುಲೈ 2020ರಲ್ಲಿ ಸ್ಥಾಪಿಸಲಾಯಿತು. ನಗರ ಸ್ಥಳೀಯ ಸಂಸ್ಥೆಗಳ ಕಾರ್ಯಚಟುವಟಿಕೆಗಳನ್ನು ಮೇಲ್ವಿಚಾರಣೆ ಮಾಡುವ ಉದ್ದೇಶದಿಂದ ಆಂತರಿಕ ಲೆಕ್ಕಪರಿಶೀಲನಾ ಘಟಕವನ್ನು ರಾಜ್ಯ ಸರ್ಕಾರವು ಮಾರ್ಚ್ 2022ರಲ್ಲಿ ರಚಿಸಿತು. ಬಿಬಿಎಂಪಿಗೆ ಸಂಬಂಧಿಸಿದಂತೆ ಕರಡು ನಿಯಮಗಳು ಹಾಗೂ ವಿಧಾನಗಳನ್ನು ರಾಜ್ಯ ಸರ್ಕಾರವು ಇನ್ನೂ ಅಂಗೀಕರಿಸಿಲ್ಲ.

ಒಟ್ಟು ಬಾಕಿ ಉಳಿದಿದ್ದ 681 ತಪಾಸಣಾ ವರದಿಗಳಲ್ಲಿ, 10,873 ಕಂಡಿಕೆಗಳನ್ನು ಒಳಗೊಂಡ 625 ತಪಾಸಣಾ ವರದಿಗಳು ಮೂರು ವರ್ಷಕ್ಕಿಂತ ಹೆಚ್ಚು ಕಾಲ ಬಾಕಿ ಉಳಿದಿದ್ದು, ಇದು ನಗರ ಸ್ಥಳೀಯ ಸಂಸ್ಥೆಗಳಿಂದ ಅಗತ್ಯ ಕ್ರಮ ಕೈಗೊಳ್ಳಲಾಗಿಲ್ಲ ಎಂಬುದನ್ನು ಸೂಚಿಸುತ್ತದೆ.

**(ಅಧ್ಯಾಯ–II)**

ಕಟ್ಟಡ ಪರವಾನಗಿ ಶುಲ್ಕದ ಕಡಿಮೆ ಸಂಗ್ರಹ ₹ 45.61 ಲಕ್ಷ ಮತ್ತು ವಸೂಲಿಸದಿರುವ/ಕಡಿಮೆ ವಸೂಲಿಸಲಾದ ಸಂಗ್ರಹಿಸಲಾದ ಕಟ್ಟಡ ಪರವಾನಗಿ ಶುಲ್ಕ ₹ 86.05 ಲಕ್ಷ

**(ಕಂಡಿಕೆ–3.6.1 ಮತ್ತು 3.6.2)**

ಚೆಕ್‌ಗಳು ಅಮಾನ್ಯವಾದ್ದರಿಂದ ಬಾಕಿಗಳನ್ನು ವಸೂಲಿ ಮಾಡದ ಕಾರಣ ಆದಾಯದ ನಷ್ಟ ₹ 48.74 ಲಕ್ಷ.

**(ಕಂಡಿಕೆ–3.6.3)**

ಗ್ರಾಮ ಪಂಚಾಯಿತಿ ಆವರಣದಲ್ಲಿ ನಿರ್ಮಿಸಲಾದ ಜಾಹೀರಾತು ಫಲಕಗಳ ಮೇಲಿನ ಬಾಡಿಗೆಯ ಕಡಿಮೆ ಸಂಗ್ರಹ ₹ 4.01 ಲಕ್ಷ.

**(ಕಂಡಿಕೆ–3.6.4)**

ರಶೀದಿ ಪುಸ್ತಕಗಳ ಸಂಗ್ರಹಣೆ ಮತ್ತು ಇತರ ಖರೀದಿಗಳಿಗೆ ಸಂಬಂಧಿಸಿದಂತೆ ತಾಲ್ಲೂಕು ಪಂಚಾಯಿತಿ ಅಧಿಕಾರಿಯು ತನ್ನ ವೈಯಕ್ತಿಕ ಸಾಮರ್ಥ್ಯದಲ್ಲಿ ಗ್ರಾಮ ಪಂಚಾಯಿತಿಗಳಿಂದ ಚೆಕ್‌ಗಳನ್ನು ಅಕ್ರಮವಾಗಿ ಸ್ವೀಕರಿಸುವುದು.

**(ಕಂಡಿಕೆ–3.6.5)**

ಭೂ ಉತ್ಖನನದ ಕಾಮಗಾರಿಯನ್ನು ಯಾಂತ್ರಿಕ ವಿಧಾನದ ಬದಲು ಮಾನವಕೈದುಡಿತ ವಿಧಾನದಿಂದ ಮಾಡಿದೆ ಎಂಬ ಅಸಮರ್ಪಕ ಪ್ರಮಾಣೀಕರಣವು ಗುತ್ತಿಗೆದಾರರಿಗೆ ₹ 13.06 ಲಕ್ಷ ಹೆಚ್ಚುವರಿ ಮೊತ್ತವನ್ನು ಪಾವತಿಸಲು ಅನುಕೂಲ ಮಾಡಿಕೊಟ್ಟಿತು.

**(ಕಂಡಿಕೆ–3.6.6)**